ಓ.ಎಸ್ಃ 240/2015

ಡಿ. ಡಬ್ಲ್ಯು ಃ 01

**ಸಾಕ್ಷಿಗೆ ದಿನಾಂಕ 28.01.2020 ರಂದು ಪ್ರಮಾಣ ವಚನ ನೀಡಲಾಯಿತು.**

**ಪಾಟೀಸವಾಲುಃ ವಾದಿ ಪರ ಶ್ರೀಮತಿ ಎಲ್ ವಿ ವಕೀಲರಿಂದ**

ನಿಡಿ 7 ದಾಖಲೆಯ ಮೇಲೆ ಪ್ರತಿವಾದಿ ತನ್ನ ಮಾಲೀಕತ್ವವನ್ನು ಗುರುತಿಸಿಕೊಂಡಿರುತ್ತಾರೆ. ನಿಡಿ 7 ರಲ್ಲಿ ತೋರಿಸಲಾದ ಆಸ್ತಿಯ ಚೆಕ್ ಬಂದಿ ಹಾಗೂ ವಿಸ್ತೀರ್ಣ ಸರಿಯಾಗಿದೆ. ನಿಡಿ 7ಕ್ರಯಪತ್ರದ ಪ್ರಕಾರ ಖಾತೆ ಬದಲಾವಣೆ ಆಗಿದೆ ಎಂದರೆ ಸರಿ . ಕ್ರಯಪತ್ರದಲ್ಲಿ ತೋರಿಸಲಾದ ಆಸ್ತಿಗೆ ಮಾತ್ರ ಪ್ರತಿವಾದಿ ಹಕ್ಕುದಾರಳು ಎಂದರೆ ಸರಿ . ನಿಡಿ 7 ರಲ್ಲಿ ತೋರಿಸಲಾದ ಆಸ್ತಿಗೆ ನಿಯೋಗಿಯನ್ನು ನೇಮಿಸಲು ನನಗೆ ತೊಂದರೆ ಇಲ್ಲ. ದಾವಾ ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ ನಿಯೋಗಿಯನ್ನು ನೇಮಿಸಲು ತೊಂದರೆ ಇಲ್ಲ. ಪ್ರತಿವಾದಿಯು ಖರೀದಿಸಿದ ಸ್ವತ್ತಿನ ಮಾರಾಟಗಾರರು ಹಾಗೂ ನನಗೂ ಯಾವುದೇ ಸಂಬಂಧ ಇಲ್ಲ. ಶಾರದಮ್ಮ ಹಾಗೂ ನನಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿ . ವಾದಿಯು ದಾವಾಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ ಶಾಶ್ವತ ನಿರ್ಭಂದಕಾಜ್ಞೆ ಗಾಗಿ ಓ ಎಸ್ 245/1988 ರಂತೆ ದಾವೆಯನ್ನು ಸಲ್ಲಿಸಿದ್ದರು ಎಂದರೆ ಸರಿ . ಸದರಿ ದಾವೆಯಲ್ಲಿ ಪ್ರತಿವಾದಿಯ ವಿರುದ್ದ ಶಾಶ್ವತ ನಿರ್ಭಂದಕಾಜ್ಞೆ ಸಲ್ಲಿಸಿದ್ದೆವು ಎಂದರೆ ಸರಿ . ಸದರಿ ದಾವೆಯಲ್ಲಿ ತಕರಾರು ಸಲ್ಲಿಸಿದ್ದೆವು ಎಂದರೆ ಸರಿ . ಸದರಿ ದಾವೆಯಲ್ಲಿ ಪ್ರತಿವಾದ ಪತ್ರವನ್ನು ಸಲ್ಲಿಸಿ ಪ್ರತಿವಾದಿಯು ಆಸ್ತಿಯನ್ನು ಖರೀದಿ

ಮಾಡಿದ ಬಗ್ಗೆ ನಮೂದು ಮಾಡಿದ್ದೆವು ಎಂದರೆ ಸರಿ . ಪೂ- ಮಾರಮ್ಮನ ಗುಡಿ ರಸ್ತೆ, ಪ-ಸೀತಮ್ಮ ನವರ ರಸ್ತೆ ಮತ್ತು ಮನೆ, ಉ-ರಸ್ತೆ , ದ-ಗುಂಬಜ್ ರಸ್ತೆರಂತೆ ಚೆಕ್ ಬಂದಿ ಇದೆ ಎಂದರೆ ಸಾಕ್ಷಿಯು ಪ- ಹಾಗೂ ಉ ದಿಕ್ಕಿನಲ್ಲಿ ರಸ್ತೆ ಇಲ್ಲ ಎನ್ನುತ್ತಾರೆ. ಮೇಲೆ ಹೇಳಿದ ಚೆಕ್ ಬಂದಿಗಳ ನಡುವೆ ಯಾವುದೇಆಸ್ತಿ ಇಲ್ಲ ಎನ್ನುತ್ತಾರೆ. ಸದರಿ ಚೆಕ್ ಬಂದಿಗಳ ನಡುವೆ ದಾವಾ ಷೆಡ್ಯೂಲ್ ಆಸ್ತಿ ಇದೆ ಎಂದರೆ ಸರಿಯಲ್ಲ. ಸದರಿ ಚೆಕ್ ಬಂದಿಗಳ ನಡುವೆ ಖಾಲಿ ಸ್ವತ್ತು ಇದೆ ಅದು ನನ್ನದಾಗಿರುತ್ತದೆ. ಖಾಲಿ ಜಮೀನಿನ ಚೆಕ್ ಬಂದಿಯು ಪೂ- ಬೋರಯ್ಯ ,ಸಿದ್ದಯ್ಯನವರ ನಿವೇಶನ , ಪ- ನನ್ನ ಬಾಬ್ತು ನಿವೇಶನ , ಉ- ಶಿವಲಿಂಗಯ್ಯನವರ ಖಾಲಿ ಜಾಗ , ದ- ಗುಂಬಜ್ ರಸ್ತೆಯಂತೆ ಚೆಕ್ ಬಂದಿ ಇರುತ್ತದೆ. ಸದರಿ ಚೆಕ್ ಬಂದಿಗಳ ನಡುವೆ ಇರುವ ಖಾಲಿ ನಿವೇಶವನ್ನು ನಾನು 1983 ರಲ್ಲಿ ಕೊಂಡುಕೊಂಡಿರುತ್ತೇನೆ. ಖಾಲಿ ನಿವೇಶನದ ಒಟ್ಟು ವಿಸ್ತೀರ್ಣ ಪೂ-ಪ 45 ಅಡಿ , ಉ -ದ 82 ವರೆ ಅಡಿ ವಿಸ್ತೀರ್ಣ ಇದೆ. ನಿಡಿ 7 ರಲ್ಲಿ ನಮೂದಿಸಿದ ಪ್ರಕಾರ ಪೂ- ಶಾರದಮ್ಮರವರ ಖಾಲಿ ಜಾಗ , ಸಿದ್ದಯ್ಯನ ಮನೆ, ಪ-ಕ್ಕೆ ರಸ್ತೆ , ಉ- ಶಿವಲಿಂಗೇಗೌಡರ ಮನೆ ಮತ್ತು ಮುನ್ಸಿಪಾಲ್ ಖಾಲಿ ಜಾಗ, ದ- ಕ್ಕೆ ಸೀತಮ್ಮನ ಮನೆ ಮತ್ತು ರಸ್ತೆಯಂತೆ ಚೆಕ್ ಬಂದಿ ಇದೆ ಎಂದರೆ ಸರಿಯಲ್ಲ.

ನಿಡಿ 7 ರಲ್ಲಿ ನಮೂದಿಸಿರುವ ಆಸ್ತಿಯ ಚೆಕ್ ಬಂದಿ ನನಗೆ ಹೇಳಲು ಬರುವುದಿಲ್ಲ. ಖಾಲಿ ನಿವೇಶನ ಮೇಲೆ ಹೇಳಿದ ಚೆಕ್ ಬಂದಿಗೆ ಅನ್ವಯಿಸುವುದಿಲ್ಲ

ಎಂದರೆ ಸರಿಯಲ್ಲ. ಖಾಲಿ ನಿವೇಶನ ನನಗೆ ಸೇರಿದ್ದು ಎಂದು ತೋರಿಸಲು ನಾನು ನಿಡಿ 7 ನ್ನು ಹಾಜರುಪಡಿಸಿರುತ್ತೇನೆ. ನಿಡಿ 7 ರಲ್ಲಿ ನಾನು ಖರೀದಿಸಿದ ಆಸ್ತಿ ಹಾಗೂ ದಾವಾ ಷೆಡ್ಯೂಲ್ ಸ್ವತ್ತು ಬೇರೆ ಬೇರೆ ಎಂದರೆ ಸರಿಯಲ್ಲ. ನಿಡಿ 7 ರ ಆಸ್ತಿಯ ಉ- ಸಿದ್ದಯ್ಯನವರ ಜಮೀನು ಹಾಗೂ ದಾವಾ ಷೆಡ್ಯೂಲ್ ಸ್ವತ್ತು ಹಾಗೂ ಖಾಲಿ ಜಾಗ ದಕ್ಷಿಣ ದಿಕ್ಕಿಗೆ ಬರುತ್ತದೆ ಎಂದರೆ ಸರಿಯಲ್ಲ.

ನಮ್ಮ ಮನೆಯಿಂದ ದಕ್ಷಿಣ ದಿಕ್ಕಿಗೆ ಇರುವ ಖಾಲಿ ಜಾಗದ ಅಳತೆ ನನಗೆ ಹೇಳಲು ಬರುವುದಿಲ್ಲ. ಸದರಿ ಖಾಲಿ ಜಾಗದಲ್ಲಿ ವಾದಿಯು ಮನೆಯನ್ನು ಕಟ್ಟಿಕೊಳ್ಳಲು ತಳಪಾಯವನ್ನು ಹಾಕಿದ್ದಾರೆ ಎಂದರೆ ಸರಿಯಲ್ಲ. ಶಾರದಮ್ಮರವರು ವಾದಿಗೆ ಸದರಿ ಆಸ್ತಿಗೆ ಸಂಬಂಧಿಸಿದಂತೆ ಕ್ರಯಪತ್ರವನ್ನು ಬರೆದುಕೊಟ್ಟಿದ್ದಾರೆ ಎಂದರೆ ಸರಿ . ದಾವಾ ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ ಶಾರದಮ್ಮನವರ ಕುಟುಂಬಸ್ಥರು ಹಾಗೂ ವಾರಸ್ದಾರರು ವಾದಿಯ ಕ್ರಯವನ್ನು ಪ್ರಶ್ನಿಸಿಲ್ಲ ಎಂದರೆ ಸರಿ . ವಾದಿಗೆ ಕ್ರಯಪತ್ರದಲ್ಲಿ ಕೊಟ್ಟ ಸ್ವಾಧೀನವನ್ನು ಯಾರೂ ಪ್ರಶ್ನಿಸಿಲ್ಲ ಎಂದರೆ ಸರಿಯಲ್ಲ. ನಿಪಿ 1 ಕ್ರಯ ಪತ್ರವನ್ನು ನಾವು ಪ್ರಶ್ನಿಸಿಲ್ಲ ಎಂದರೆ ಸರಿಯಲ್ಲ. ನಿಪಿ 1 ರ ಪ್ರಕಾರ ವಾದಿಯ ಹೆಸರಿಗೆ ದಾವಾ ಷೆಡ್ಯೂಲ್ ಸ್ವತ್ತಿನ ಖಾತೆ ಬದಲಾವಣೆ ಆಗಿದೆ ಎಂದರೆ ಸರಿ . ಖಾತೆ ಬದಲಾವಣೆಯಂತೆ ವಾದಿಯ ಹೆಸರಿಗೆ ಬಿಲ್ಡಿಂಗ್ ಲೈಸೆನ್ಸ್ ನೀಡಿದ್ದಾರೆ ಎಂದರೆ ಸರಿ . ಸಾಕ್ಷಿಗೆ ಸದರಿ ಬಿಲ್ಡಿಂಗ್ ಲೈಸೆನ್ಸ್ ನ್ನು ತೋರಿಸಲಾಗಿ ಒಪ್ಪಿಕೊಂಡಿದ್ದರಿಂದ ನಿಪಿ 10 ಎಂದು ಗುರುತಿಸಲಾಯಿತು. ನಿಪಿ 10 ರ ಪ್ರಕಾರ ದಾವಾ ಷೆಡ್ಯೂಲ್ ಸ್ವತ್ತು ದಾವೆಯಲ್ಲಿ ತೋರಿಸಿದ ಚೆಕ್

ಬಂದಿಯಲ್ಲಿ ಬರುತ್ತದೆ ಎಂದರೆ ಸರಿಯಲ್ಲ. ನಾವು ಖರೀದಿ ಮಾಡಿದ ಸ್ವತ್ತಿನ ಖಾತಾ ನಂ 179. ಖಾತಾ ನಂ 34/2691 ನನಗೆ ಸೇರಿದ್ದಲ್ಲ ಎಂದರೆ ಸರಿ . ವಾದಿಯು ಪೂ-ಪಃ 24 ಅಡಿ, ಉ-ದ ಃ 20 ಅಡಿಯಂತೆ ತಳಪಾಯವನ್ನು ಹಾಕಿದ್ದಾರೆ ಎಂದರೆ ಸರಿಯಲ್ಲ. ದಾವಾ ಷೆಡ್ಯೂಲ್ ಸ್ವತ್ತು ನಮ್ಮ ಮನೆಯ ಹಾಗೂ ಸಿದ್ದಯ್ಯನವರ ಮನೆಯ ದಕ್ಷಿಣ ಭಾಗಕ್ಕೆ ಬರುತ್ತದೆ ಎಂದರೆ ಸರಿಯಲ್ಲ. ನಿಪಿ 10 ನ್ನು ನಾನು ಎಂ ಎ 17/88-89 ರಂತೆ ಮಾನ್ಯ ಜಿಲ್ಲಾಧಿಕಾರಿಗಳ ನ್ಯಾಯಾಲಯದಲ್ಲಿ ಪ್ರಶ್ನೆ ಮಾಡಿದ್ದೇನೆ ಎಂದರೆ ಸರಿ . ಸದರಿ ಪ್ರಕರಣವು ದಿನಾಂಕ 25.09.1995 ರಲ್ಲಿ ವಜಾಗೊಂಡಿದೆ ಎಂದರೆ ಸರಿ . ಸದರಿ ಆದೇಶವನ್ನು ಮೈಸೂರಿನ ವಿಭಾಗಾಧಿಕಾರಿಗಳ ನ್ಯಾಯಾಲಯದಲ್ಲಿ ಎಂ ಎ 30/95-96 ರಂತೆ ಪ್ರಶ್ನೆ ಮಾಡಿದ್ದೇನೆ ಎಂದರೆ ಸರಿ . ಸದರಿ ಪ್ರಕರಣವು ದಿನಾಂಕ 16.06.1997 ರಂದು ವಜಾಗೊಂಡಿದೆ ಎಂದರೆ ಸಾಕ್ಷಿಯು ಅದು ಸಿವಿಲ್ ನ್ಯಾಯಾಲಯದ ವ್ಯಾಪ್ತಿಗೆ ಬರುತ್ತದೆ ಎಂದು ವಜಾಗೊಂಡಿದೆ ಎನ್ನುತ್ತಾರೆ. ದಾವಾ ಷೆಡ್ಯೂಲ್ ಸ್ವತ್ತು ನಾನು ಖರೀದಸಿರುವ ಆಸ್ತಿಯ ಒಂದು ಭಾಗ ಎಂದು ತೋರಿಸಲು ನಿಡಿ 7 ನ್ನು ಹಾಜರುಪಡಿಸಿರುತ್ತೇನೆ. ಪ್ರತಿವಾದಿಯ ವಿರುದ್ದ ಸಲ್ಲಿಸಿದ ಶಾಶ್ವತ ನಿರ್ಭಂದಕಾಜ್ಞೆ ದಾವೆಯ ವಿರುದ್ದ ಮೇಲ್ಮನವಿಯನ್ನು ಸಲ್ಲಿಸಿದ್ದೆವು ಎಂದರೆ ಸರಿ . ಸದರಿ ಮೇಲ್ಮನವಿ ನನ್ನ ಪರವಾಗಿ ತೀರ್ಮಾನವಾಗಿದೆ. ಓಎಸ್ 245/88 ರ ದಾವೆಯಲ್ಲಿ ಸಿದ್ದಯ್ಯರವರು ಸಾಕ್ಷಿಯಾಗಿ ಹಾಜರಾಗಿದ್ದರು ಎಂದರೆ ಸರಿ . ಸಿದ್ದಯ್ಯರವರು ತಮ್ಮ ಆಸ್ತಿಗೆ ಸಂಬಂಧಿಸಿದ ಖರೀದಿ ಪತ್ರವನ್ನು ನ್ಯಾ.ಕ್ಕೆ

ಹಾಜರುಪಡಿಸಿದ್ದರು ಎಂದರೆ ಸರಿ . ಸಿದ್ದಯ್ಯರವರು ಈಗ ತೀರಿಕೊಂಡಿದ್ದಾರೆ ಎಂದರೆಸರಿ .

ಓ ಎಸ್ 245/88 ರ ದಾವೆಯಲ್ಲಿ ನಾವು ಮರಣ ಶಾಸನವನ್ನು ಹಾಜರುಪಡಿಸಿದ್ದೇವೆ ಎಂದರೆ ಸರಿ . ನಿಡಿ 10 ಚೆನ್ನಯ್ಯನವರಿಗೆ ಸಂಬಂಧಿಸಿದ ವೈಯಕ್ತಿಕ ದಾಖಲೆ ಎಂದರೆ ಸರಿ . ಚೆನ್ನಯ್ಯನವರು ನನಗೆ ಸಂಬಂಧಿಕರಲ್ಲ ನಿಡಿ 10 ಮರಣ ಶಾಸನವನ್ನು ನನಗೆ ಅವಶ್ಯಕತೆ ಇರುವುದರಿಂದ ಪಡೆದುಕೊಂಡಿರುತ್ತೇನೆ. ಚೆನ್ನಯ್ಯನವರು ನಿಡಿ 10 ನ್ನು ಬರೆಯುವುದಕ್ಕಿಂತ ಪೂರ್ವದಲ್ಲಿ ಬೇರೆ ಏನಾದರೂ ಮರಣ ಶಾಸನವನ್ನು ಬರೆದಿದ್ದರೋ ಇಲ್ಲವೋ ನನಗೆ ಗೊತ್ತಿಲ್ಲ. ನಿಡಿ 10 ರಲ್ಲಿ ಬರೆದಿರುವ ಅಂಶಗಳನ್ನು ನಾನು ಓದಿ ತಿಳಿದುಕೊಂಡಿರುತ್ತೇನೆ. ನಿಡಿ 10 ರಲ್ಲಿ ಲಕ್ಷ್ಮಮ್ಮರವರು ಯಾವ ರೀತಿ ಕಾರ್ಯವನ್ನು ನಿರ್ವಹಿಸಬೇಕು ಎಂದು ಬರೆದಿದೆ ಎಂದರೆ ಸರಿ . ನಿಡಿ 10 ರಲ್ಲಿ ಚೆನ್ನಯ್ಯನವರು ತಮ್ಮ ಕುಟುಂಬದ ಎಲ್ಲಾ ಆಸ್ತಿಗಳನ್ನು ಸೇರಿಸಲಾಗಿದೆಯೋ ಇಲ್ಲವೋ ಎಂದರೆ ಸಾಕ್ಷಿಯು ಚೆನ್ನಯ್ಯನವರು ತಮ್ಮ ಹೆಸರಿಗೆ ಇದ್ದ ಆಸ್ತಿಯನ್ನು ಮರಣ ಶಾಸನದಲ್ಲಿ ಬರೆದಿದೆ ಎನ್ನುತ್ತಾರೆ. ಚೆನ್ನಯ್ಯನವರಿಗೆ ದಾವಾ ಷೆಡ್ಯೂಲ್ ಸ್ವತ್ತನ್ನು ಹೊರತುಪಡಿಸಿ ಬೇರೆ ಆಸ್ತಿ ಇತ್ತು ಎಂದರೆ ಸರಿಯಲ್ಲ. ನಾನು ಸಲ್ಲಿಸಿದ ಮೇಲ್ಮನವಿಯ ವಿರುದ್ದ ವಾದಿಯು ಮೇಲ್ಮನವಿಯನ್ನು ಸಲ್ಲಿಸಿದ್ದು ಸದರಿ ಮೇಲ್ಮನವಿ ವಜಾಗೊಂಡಿದ್ದರಿಂದ ವಾದಿಯು ತನ್ನ ಮಾಲೀಕತ್ವಕ್ಕಾಗಿ ದಾವೆಯನ್ನು ಸಲ್ಲಿಸಿದ್ದಾರೆ ಎಂದರೆ ಸರಿಯಲ್ಲ. ದಾವಾ ಷೆಡ್ಯೂಲ್ ಸ್ವತ್ತು ನನಗೆ ಸೇರಿದ್ದು

ಎಂದು ಈ ಮೊದಲು ತೀರ್ಮಾನವಾದ ಮೇಲ್ಮನವಿಯಲ್ಲಾಗಲೀ , ದಾವೆಯಲ್ಲಾಗಲೀ ನಾನು ಪ್ರಶ್ನಿಸಿಲ್ಲ ಎಂದರೆ ಸರಿಯಲ್ಲ. ಶಾರದಮ್ಮರವರಿಗೆ ಲಕ್ಷ್ಮಮ್ಮ ರವರು ಬರೆದುಕೊಟ್ಟ ಕ್ರಯಪತ್ರವನ್ನು ನಾನು ಪ್ರಶ್ನಿಸಿಲ್ಲ ಎಂದರೆ ಸರಿಯಲ್ಲ. ಶಾರದಮ್ಮರವರು ದಾವಾ ಷೆಡ್ಯೂಲ್ ಸ್ವತ್ತಿಗೆ ಮಾಲೀಕರಾಗಿದ್ದರಿಂದ ವಾದಿಯು ದಾವಾ ಷೆಡ್ಯೂಲ್ ಸ್ವತ್ತನ್ನು ಕೊಂಡುಕೂಂಡಿದ್ದಾರೆ ಎಂದರೆ ಸರಿಯಲ್ಲ. ನಾನು ಕೊಂಡುಕೊಂಡ ಪೂ -ದಿಕ್ಕಿಗೆ ಇರುವ ಶಾರದಮ್ಮ ರವರ ಆಸ್ತಿ ವಾದಿಯು ಕೊಂಡುಕೊಂಡ ಕ್ರಯದಾರರಾದ ಶಾರದಮ್ಮ ಎಂದರೆಲ ಸರಿಯಲ್ಲ. ನಾನು ಕೊಂಡುಕೊಂಡ ಆಸ್ತಿಯನ್ನು ವಾದಿಯೂ ಎಂದೂ ಪ್ರಶ್ನಿಸಿಲ್ಲ ಎಂದರೆ ಸರಿಯಲ್ಲ. ನಿಡಿ 10 ರ ಲ್ಲಿ ದಾವಾ ಷೆಡ್ಯೂಲ್ ಸ್ವತ್ತು ನಮೂದಾಗಿಲ್ಲ ಹಾಗಾಗಿ ವಾದಿಯ ಮಾಲೀಕತ್ವದಲ್ಲಿರುವ ದಾವಾ ಷೆಡ್ಯೂಲ್ ಸ್ವತ್ತನ್ನು ಖಬಳಿಸುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಡಿ 1 ರಲ್ಲಿ ತೋರಿಸಿದ ಹೆಂಚಿನ ಮನೆ ನನಗೆ ಸೇರಿದ್ದಾಗಿದೆ ಎಂದರೆ ಸರಿ . ನಿಡಿ 1 ರಲ್ಲಿ ಹೆಂಚಿನ ಮನೆಯ ಪಕ್ಕಕ್ಕೆ ಇರುವ ಮನೆ ಸಿದ್ದಯ್ಯನವರಿಗೆ ಸೇರಿದ ಮನೆ ಎಂದರೆ ಸರಿ . ನಿಡಿ 1 ರ ಮುಂದೆ ಇರುವ ಖಾಲಿ ಜಾಗ ರಸ್ತೆ ಎಂದರೆ ಸರಿಯಲ್ಲ. ನಮ್ಮ ಮನೆಗೆ ಓಡಾಡಲು ನಿಡಿ 1 ರಲ್ಲಿ ತೋರಿಸಿದ ಜಾಗವನ್ನು ಉಪಯೋಗಿಸುತ್ತೇವೆ ಎಂದರೆ ಸರಿ . ನಿಡಿ 7 ರಲ್ಲಿ ತೋರಿಸಿದ ಆಸ್ತಿಯು ನಿಡಿ 1 ರಲ್ಲಿರುವ ಖಾಲಿ

ಜಾಗಕ್ಕೆ ಸಂಬಂದಿಸಿದ್ದಲ್ಲ ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿದ ದಾಖಲೆಗಳನ್ನು ಈ ದಾವೆಗೋಸ್ಕರ ಸೃಷ್ಠಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದರು ನೀಡಲಾಯಿತು.

ನನ್ನ ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಸಾ.ಓ.ಹೇ.ಸ.ಒ

ಅಪರ ಸಿವಿಲ್ ಜಡ್ಜ್ ಮತ್ತು ಜೆಎಂಎಫ್.ಸಿ
ಶ್ರೀರಂಗಪಟ್ಟಣ